**<u>ದಿನಾಂಕ 18.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಸಾಕ್ಷಿಗೆ ಹಿಂದಿ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆ ಬರುವುದಿಲ್ಲ ಎಂದು ಹೇಳಿದ ಕಾರಣ ಶ್ರೀಮತಿ ಎಲ್.ಕೆ ವಕೀಲರನ್ನು ತರ್ಜುಮೆಗಾರರನ್ನಾಗಿ ನೇಮಿಸಿಕೊಳ್ಳಲು ಅನುಮತಿ ನೀಡಲಾಯಿತು.

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.</u>**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 1** ಎಂದು, ದೂರಿನ ದೃಢೀಕೃತ ಪ್ರತಿಯನ್ನು **ನಿಪಿ 2** ಎಂದು, ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯನ್ನು **ನಿಪಿ 3** ಎಂದು, ಐಎಮ್‌ವಿ ವರದಿಗಳ ದೃಢೀಕೃತ ಪ್ರತಿಗಳನ್ನು ಒಟ್ಟಾಗಿ **ನಿಪಿ 4** ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು **ನಿಪಿ 5** ಎಂದು, ಡಿಸ್ಚಾರ್ಜ್ ಸಮರಿಗಳನ್ನು ಒಟ್ಟಾಗಿ **ನಿಪಿ 6** ಎಂದು, ಪೊಲೀಸ್ ಇಂಟಿಮೇಷನ್ ನ ಧೃಡಿಕೃತ ಪ್ರತಿಯನ್ನು **ನಿಪಿ 7** ಎಂದು, ಮೋಟಾರು ವಾಹನ ಕಾಯ್ದೆಯ ಕಲಂ 133 ರಡಿ ನೀಡಿರುವ ನೋಟೀಸುಗಳು ಮತ್ತು ಸದರಿ ನೋಟೀಸುಗಳಿಗೆ ನೀಡಿರುವ ಉತ್ತರದ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ **ನಿಪಿ 8 ಮತ್ತು 9** ಎಂದು, ದೋಷಾರೋಪಣ ಪಟ್ಟಿಯ ದೃಢೀಕೃತ ಪ್ರತಿಯನ್ನು **ನಿಪಿ 10** ಎಂದು, ಮೆಡಿಕಲ್ ಬಿಲ್ಲುಗಳನ್ನು **ನಿಪಿ 11** ಎಂದು, ವೈದ್ಯರ ಸಲಹಾ ಚೀಟಿಗಳನ್ನು **ನಿಪಿ 12** ಎಂದು, ಹಣ ಪಾವತಿ ರಶೀದಿಗಳನ್ನು **ನಿಪಿ 13** ಎಂದು, ಚಾಲನಾ ಪರವಾನಗಿ ಮತ್ತು ಆಧಾರ್ ಕಾರ್ಡಿನ ನೋಟರಿ ಪ್ರತಿ(ಮೂಲ ದಾಖಲಾತಿಯೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲಾತಿಯನ್ನು ಹಿಂದಿರುಗಿಸಲಾಯಿತು)ಗಳನ್ನು ಕ್ರಮವಾಗಿ **ನಿಪಿ 14 ಮತ್ತು 15** ಎಂದು ಗುರುತಿಸಲಾಯಿತು.

2ನೇ ಎದುರುದಾರರು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನಾನು 8ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಅಪಘಾತ ಬೆಂಗಳೂರಿನಲ್ಲಿ ನಾನು ಹೊಟೇಲ್ ನಿಂದ ಹೊರಗೆ ಹೋಗಿದ್ದಾಗ ಸಂಭವಿಸಿರುತ್ತದೆ. ಅಪಘಾತ ದಿನಾಂಕ 14.02.2025ರಂದು ಸಂಭವಿಸಿರುತ್ತದೆ. ದೂರನ್ನು ಎರಡು ದಿನ ತಡವಾಗಿ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಪ್ರಜ್ಞೆ ಇರಲ್ಲಿಲ ಮತ್ತು ನಾನು ಆಸ್ಪತ್ರೆಯಲ್ಲಿ ಇದ್ದ ಕಾರಣ ತಡವಾಗಿ ದೂರು ನೀಡಿರುತ್ತಾರೆ. ದೂರನ್ನು ವಿಶಾಲ್ ವರ್ಮ ನೀಡಿರುತ್ತಾರೆ. ಸದರಿಯವರು ನನ್ನ ಊರಿನವರು. ಅಪಘಾತವಾಗುವ 4 ವರ್ಷಗಳ ಪೂರ್ವದಿಂದ ಬೆಂಗಳೂರಿನಲ್ಲಿ ಇದ್ದೇನೆ. ಆಗಿನಿಂದ ನಾನು ಒಂದೇ ಹೊಟೇಲ್ ನಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದೆನು. ನನಗೆ ಕೇಳಿದ ವಿಚಾರಗಳನ್ನು ತಿಳಿದುಕೊಂಡು ಉತ್ತರಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನನಗೆ ಈಗ ಅಡುಗೆ ಕೆಲಸ ಮಾಡಲು ಆಗುತ್ತಿಲ್ಲ. ನನಗೆ ಸಂಬಳದ ಹಣವನ್ನು ನಗದು ರೂಪದಲ್ಲಿ ನೀಡುತ್ತಿದ್ದು, ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಅಪಘಾತದ ಗಾಯಗಳಿಂದ ನನಗೆ ಯಾವುದೇ ತೊಂದರೆ ಆಗಿಲ್ಲ ಮತ್ತು ಈಗಲೂ ನಾನು ಕೆಲಸ ಮಾಡಬಹುದು ಎಂದರೆ ಸರಿಯಲ್ಲ.

ಆಪಾದಿತ ಟ್ರ್ಯಾಕ್ಟರ್ ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆ. ಸದರಿ ವಾಹನದ ಮಾಲೀಕರು ನನಗೆ ಪರಿಚಯ ಇಲ್ಲ. ನನಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಮತ್ತು ಆ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಗಿ ಇದೆ. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನ ನಾನು ಕೆಲಸ ಮಾಡುತ್ತಿದ್ದ ಹೊಟೇಲ್ ನ ಮಾಲೀಕರಿಗೆ ಸೇರಿತ್ತು. ಸದರಿ ದ್ವಿಚಕ್ರ ವಾಹನಕ್ಕೆ ವಿಮೆ ಇತ್ತೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯ ಖರ್ಚು ವೆಚ್ಚಗಳನ್ನು

ಹೊಟೇಲ್ ನ ಮಾಲೀಕರು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಚಿಕಿತ್ಸೆಗೆ ನಾನು ಹೇಳಿರುವಷ್ಟು ಹಣವನ್ನು ಖರ್ಚು ಮಾಡಿಲ್ಲ ಮತ್ತು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮೊದಲಿನಂತೆ ಈಗಲೂ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿತ ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**